document verification ಗೋಸ್ಕರ provision ಮಾಡಿದ್ದೆವು. ಆ ಸಮಯದಲ್ಲಿ ಎಲ್ಲರೂ ಕೂಡ SC category ಯಿಂದ ಬಂದಿರುವವರು, SC Certificate produce ಮಾಡಿದ ಸಂದರ್ಭದಲ್ಲಿ ಅವರೆಲ್ಲರನ್ನೂ ಪರಿಗಣನೆ ಮಾಡುವ ಕೆಲಸವನ್ನು ಮಾಡಿದ್ದೇವೆ. ಆದು ಇನ್ನೂ ಆಗಿಲ್ಲ. ಉದಾಹರಣೆಗೆ, ಒಬ್ಬ Ex-servicemen ಇದ್ದಂಥವರು document ಗಳನ್ನು ಕೊಟ್ಟಿರಲಿಲ್ಲ. ಇದಾದ ಮೇಲೆ 7 ದಿವಸಗಳ ಕಾಲ objection call for ಮಾಡಿದ ಸಂದರ್ಭದಲ್ಲಿ ಯಾರ್ಯಾರು ಯಾವ ಯಾವ ವರ್ಗಕ್ಕೆ ಬೇಕಾಗಿರುವಂಥ documentations ಕೊಟ್ಟಿದ್ದಾರೆ. ಅದನ್ನು ಆಯಾ category ಗೆ ತರುವಂಥ ಕೆಲಸ ಆಗಿದೆ. ಆ verification time ನಲ್ಲಿ document ಕೊಟ್ಟದ್ದೇ ಆಗಿದ್ದರೆ. ಆ ಲಿಸ್ಟ್‌ನಲ್ಲಿ ಬಂದಿದ್ದರೆ ಎಲ್ಲೂ ಅನ್ಯಾಯವಾಗದಂತೆ ನೋಡಿಕೊಂಡಿದ್ದೇವೆ.

ಶ್ರೀ ಕೆ.ಜಿ. ಕುಮಾರಸ್ವಾಮಿ : – General Meeting ನಲ್ಲಿ ನೀವು SC ಆಯ್ಕೆ ಮಾಡಿದ್ದೀರಾ ?

ಶ್ರೀ ಎಸ್.ಎ. ರಾಮದಾಸ್ : – ಈ ಬಾರಿ 820 general category ಗಳಿವೆ. ಅದರಲ್ಲಿ ಈ ಸಲ ನಾವು SC/ST/OBC ಅಭ್ಯರ್ಥಿಗಳನ್ನು general category ಯಲ್ಲಿ 182 ಮಕ್ಕಳನ್ನು merit list ನಲ್ಲಿ ಕೊಟ್ಟಿದ್ದೇವೆ.

8) ವಿಷಯ : ಕುಣಿಗಲ್‌ನ ಅಂಚೇಪಾಳ್ಯದಲ್ಲಿರುವ ಕೈಗಾರಿಕಾ ಎಸ್ಟೇಟ್‌ನಲ್ಲಿ ಪರಿಸರ ವಿರೋಧಿ ಕಾರ್ಖಾನೆಗಳು ಸ್ಥಾಪನೆಯಾಗಿರುವ ಬಗ್ಗೆ.

ಶ್ರೀ ರಾಮಸ್ವಾಮಿ ಗೌಡ ಬಿ.ಬಿ. (ಕುಣಿಗಲ್) : – ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕುಣಿಗಲ್‌ನಲ್ಲಿ ಅಂಚೆಪಾಳ್ಯ ಎನ್ನುವ ಸ್ಥಳದಲ್ಲಿ ಒಂದು ಕೈಗಾರಿಕಾ ಎಸ್ಟೇಟ್ ಇದೆ. ಅಲ್ಲಿ ಸುಮಾರು 40ಕ್ಕೂ ಹೆಚ್ಚು ಕಾರ್ಖಾನೆಗಳು ಕೆಲಸ ಮಾಡುತ್ತವೆ. ಈ ಕಾರ್ಖಾನೆಗಳ ಪೈಕಿ ಕೇವಲ 2–3 ಕಾರ್ಖಾನೆಗಳನ್ನು ಹೊರತು ಪಡಿಸಿದರೆ ಉಳಿದೆಲ್ಲಾ ಕಾರ್ಖಾನೆಗಳು ಪರಿಸರ ವಿರೋಧಿ, ಜನಗಳಿಗೆ ವಿರೋಧ ಇರುವಂಥ ಕಾರ್ಖಾನೆಗಳು ಸ್ಥಾಪನೆಯಾಗಿವೆ. ಹಿಂದೆ ಒಮ್ಮೆ ತಾವು ಕೂಡಾ ಆ ಸ್ಥಳಕ್ಕೆ ಭೇಟಿ ಮಾಡಿದ್ದಿರಿ. 23ನೇ ತಾರೀಖು ಘಟನೆ ನಡೆದಿದೆ. ಗೋವಿಂದೇಗೌಡ ಎನ್ನುವ ಒಬ್ಬ ವ್ಯಕ್ತಿ ಸುಮಾರು 10 ಎಕೆರೆ ಸ್ಥಳವನ್ನು ಕೈಗಾರಿಕಾ ಪ್ರದೇಶದಲ್ಲಿ ಪಡೆದುಕೊಂಡು ....

ಅಧ್ಯಕ್ಷರು : – ಮಾಲಿನ್ಯ ಇದೆ. ಪ್ರಸ್ತಾಪ ಮಾಡಿದ್ದೀರಿ, ಉತ್ತರ ಹೇಳಿ. ಇಡೀ detail ಗೆ ಹೋಗುವುದು ಬೇಡ.

ಶ್ರೀ ರಾಮಸ್ವಾಮಿಗೌಡ ಬಿ.ಬಿ. : – ಉದ್ದೇಶಪೂರ್ವಕವಾಗಿ ಬೆಂಗಳೂರಿನಲ್ಲಿರುವಂಥ ಮತ್ತು ಹೊರಗಡೆ ಸಿಗುವಂಥ wastage ನ್ನು ತಂದು ಹಾಕುತ್ತಿರುವುದರಿಂದ ಸಾಕಷ್ಟು ಪರಿಸರ ಹಾನಿಯಾಗುತ್ತಿದೆ.

ಶ್ರೀ ಸೊಗಡು ಶಿವಣ್ಣ ಎಸ್. (ಪರಿಸರ ಮತ್ತು ಜೀವಿಶಾಸ್ತ್ರ, ಯೋಜನೆ ಮತ್ತು ಸಾಂಖ್ಯಿಕ ಸಚಿವರು) : – ಮಾನ್ಯ ಅಧ್ಯಕ್ಷರೇ, 23ನೇ ತಾರೀಖು ಕಸ ಕಡ್ಡಿ ಹಾಕಿರುವ ಜಾಗದಲ್ಲಿ ಬೆಂಕಿ ಬಿದ್ದಿರುವುದು ಸತ್ಯ. ನಾನು ನಮ್ಮ ಜಿಲ್ಲಾಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ಮಾಡಿ ಅಲ್ಲಿ ಆಗುವಂಥ ಅನಾಹುತ ತಪ್ಪಿಸಿದ್ದೇವೆ. ಮೇಲಾಗಿ ಸಂಬಂಧಪಟ್ಟ ಸಂಸ್ಥೆಯವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಲಾಗಿದೆ.

9) ವಿಷಯ : ಅರಸೀಕೆರೆಯಲ್ಲಿ NAFED ನಿಂದ ಕೊಬ್ಬರಿಯನ್ನು ಬೆಂಬಲ ಬೆಲೆಗೆ ಖರೀದಿಸುತ್ತಿರುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : – ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಅರಸೀಕೆರೆಯಲ್ಲಿ NAFED ನಿಂದ ಕೊಬ್ಬರಿಯನ್ನು ಬೆಂಬಲ ಬೆಲೆಗೆ ಖರೀದಿಸುತ್ತಿದ್ದಾರೆ. ಆದರೆ ಖರೀದಿಸಿದ 1 ತಿಂಗಳಾದರೂ ಸಹ ರೈತರಿಗೆ ಹಣವನ್ನು ಕೊಡುತ್ತಿಲ್ಲ. ಅದು ಅಲ್ಲದೆ ಬರೀ 250 ಚೀಟಿಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಅಲ್ಲಿ ಸಾವಿರಾರು ಚೀಲುಗಳು ಬರುತ್ತಿದೆ, ಅದಕ್ಕೆ ಲೇಬರ್‌ಗಳನ್ನು ಜಾಸ್ತಿ ಮಾಡಿ, ಪಾಯಿಂಟ್ಸ್ ಜಾಸ್ತಿ ಮಾಡಿ ಅತಿ ಜರೂರಾಗಿ ಕೊನೆ ಪಕ್ಷ ವಾರಕ್ಕೆ ಒಂದು ಸಾರಿಯಂತೆ ಪೇಮೆಂಟ್ ಕೊಡುವ ಸಿಸ್ಟಂನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದು ಬಹಳ ಗಂಭೀರವಾದ ವಿಚಾರ, ರೈತರ ಪ್ರಶ್ನೆ, ಬರ ಇದೆ. ಖರ್ಚಿಗೆ ದುಡ್ಡಿಲ್ಲ. ಆದ್ದರಿಂದ ಅವರ ದರ್ದಿಗೋಸ್ಕರವೇ ಸಂತೆಗೆ ಕೊಬ್ಬರಿ ತರುವುದು, 1 ತಿಂಗಳಾದರೂ ಪೇಮೆಂಟ್ ಮಾಡದಿದ್ದರೆ ರೈತರ ಗತಿ ಏನಾಗಬೇಕು ? ದಯವಿಟ್ಟು ಸರ್ಕಾರ ಸೂಕ್ತ ಕ್ರಮ ಜರುಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : – ಬೆಂಬಲ ಬೆಲೆಯಲ್ಲಿ ಕೊಬ್ಬರಿ ಖರೀದಿ ಮಾಡಿದ ತಕ್ಷಣ ಹಣ ಕೊಡಬೇಕು. ಯಾವುದೋ ಕಾರಣಗಳಿಂದ ವಿಳಂಬವಾಗುತ್ತಿದೆ ಎಂದು